**ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಿರುಗುಪ್ಪ**

**ಸಿ.ಸಿ. ನಂ. 238/2020**

**ಸಿ.ಡಬ್ಲ್ಯೂಃ 11 ಪಿ.ಡಬ್ಲ್ಯೂಃ 4**

| | | |
|---|---|---|
| ಸಾಕ್ಷಿದಾರನ ಹೆಸರು | : | ಮಾರೆಪ್ಪ |
| ತಂದೆಯ ಹೆಸರು | : | ವಿರೇಶ |
| ವಯಸ್ಸು | : | 24 ವರ್ಷ |
| ಕೆಲಸ | : | ಕೂಲಿ ಕೆಲಸ |
| ವಾಸ | : | ತೆಕ್ಕಲಕೋಟೆ |

**ಸಾಕ್ಷಿಗೆ ದಿನಾಂಕಃ 15.10.2025 ರಂದು ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ : ಸ.ಸ.ಅ. ರವರಿಂದ**

1. ನನಗೆ ಚಾಸಾ 1 ಮತ್ತು 10 ಗೊತ್ತು. ಸಾಕ್ಷಿ ನಿಪಿಃ 8 ರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸದ್ದರಿಂದ ಸದರಿ ಸಹಿಯನ್ನು ನಿಪಿಃ 8(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ದಿಃ 17.07.2019 ರಂದು ಪೋಲಿಸ್ ಠಾಣೆಯಲ್ಲಿ ಪಂಚನಾಮೆಗಾಗಿ ಮಾಡಿದ್ದೇನೆ. ನನ್ನ ಸಮಕ್ಷಮ ಪೋಟೋ ಮತ್ತು ಲಗ್ನ ಪತ್ರಿಕೆ ಜಪ್ತ ಮಾಡಿದ್ದರು. ಆಗ ಸಮಯ 1 ಗಂಟೆಯಿಂದ 2 ಗಂಟೆ ಆಗಿತ್ತು. ಸಾಕ್ಷಿ ನಿಪಿಃ 9 ರಿಂದ 12 ನ್ನು ನೋಡಿ ಗುರುತಿಸುತ್ತಾರೆ. ಆಗ ನನ್ನ ಜೊತೆ ಚಾಸಾ 1 ಮತ್ತು 10 ಇದ್ದರು.

**ಪಾಟೀ ಸವಾಲು ಆರೋಪಿತರ ಪರವಾಗಿ**

2. ನನ್ನ ಸ್ವಂತ ಊರು ತೆಕ್ಕಲಕೋಟೆ. ಪಂಚನಾಮೆಯನ್ನು ನನಗೆ ಓದಿ ಹೇಳಿದರು. ದಿಃ 17.07.2019 ರಂದು ನಾನು 12.00 ಗಂಟೆಗೆ ಎಲ್ಲಿ ಇದ್ದೆ ಎಂದು ಹೇಳಲಾಗುವುದಿಲ್ಲ. ನನ್ನನ್ನು ಪೋಲಿಸರು ಕರೆದರು. ಅವರ ಹೆಸರು ಗೊತ್ತಿಲ್ಲ. ಠಾಣೆಗೆ ಕರೆದು ಪಂಚನಾಮೆಗೆ ಸಹಿ ಮಾಡಬೇಕು ಎಂದು ಹೇಳಿದ್ದರಿಂದ ನಾನು ಸಹಿ ಮಾಡಿದ್ದೇನೆ. ಪಂಚನಾಮೆಯನ್ನು ಯಾವ ವಿಚಾರಕ್ಕೆ ಮಾಡಿದ್ದರು ಎಂದು ಗೊತ್ತಿಲ್ಲ. ಈ ಪ್ರಕಣದಲ್ಲಿನ ದೂರುದಾರರ ಹೆಸರು ಲಲಿತಮ್ಮ. ನನ್ನ ಜೊತೆ ಚಾಸಾ 10 ಇದ್ದರು. ನಾವಿಬ್ಬರೂ ಒಂದೇ ವಾಹನದಲ್ಲಿ ಹೋಗಿದ್ದೆವು. ಪಿರ್ಯಾದಿದಾರರು ಯಾವ ಊರಿನವರು ಎಂದು ನನಗೆ ಗೊತ್ತಿಲ್ಲ. ಪಂಚನಾಮೆ ಮಾಡುವ ಸಮಯದಲ್ಲಿ 3 ರಿಂದ 4 ಜನ ಇದ್ದರು. ಅವರ ಹೆಸರು ಗೊತ್ತಿಲ್ಲ. ಚಾಸಾ 1 ರವರ ಮದುವೆ ಯಾವಾಗ ಆಯಿತು ಗೊತ್ತಿಲ್ಲ. ಲಗ್ನ ಪತ್ರಿಕೆಯಲ್ಲಿ ಮದುವೆ ದಿನಾಂಕ ಏನು ನಮೂದು ಆಗಿದೆ ಎಂದು ಗೊತ್ತಿಲ್ಲ. ಪೋಲಿಸರು ಸಹಿ ಮಾಡು ಎಂದು ಹೇಳಿದ್ದಕ್ಕೆ

ನಾನು ಸಹಿ ಮಾಡಿದ್ದೆನೆ. ದಾಖಲೆಗಳನ್ನು ಜಪ್ತ ಮಾಡಿದ್ದನ್ನು ಹೊರತುಪಡಿಸಿ ನನಗೆ ಬೇರೆ ವಿಚಾರ ಗೊತ್ತಿಲ್ಲ ಎಂದರೆ ಸರಿ. ಆ ದಿನ ಒಂದು ದಾಖಲೆಗೆ ಸಹಿ ಮಾಡಿದ್ದೆನೆ. ನಾನು ಈ ಪ್ರಕರಣ ಬಿಟ್ಟು ಬೇರೆ ಪ್ರಕರಣದಲ್ಲಿ ಪಂಚರಾಗಿ ಸಹಿ ಮಾಡಿಲ್ಲ.

3. ಪೋಲಿಸರು ನನ್ನನ್ನು ಕರೆದಾಗ ಸಮಯ 12.30 ರಿಂದ 1.00 ಗಂಟೆ ಆಗಿತ್ತು. ನಾನು ಠಾಣೆಯಲ್ಲಿ 10-15 ನಿಮಿಷ ಇದ್ದೆ. ಸಹಿ ಮಾಡಿದ ನಂತರ ನಾನು ಮತ್ತು ಚಾಸಾ 10 ಠಾಣೆಯಿಂದ ಹೊರಟು ಹೋದೆವು. ಈ ದಿನ ನ್ಯಾಯಾಲಯಕ್ಕೆ ನಾವೇ ಬಂದಿರುತ್ತೇವೆ. ನಮ್ಮ ಸಮಕ್ಷಮ ಪಂಚನಾಮೆ, ಜಪ್ತ ಮಾಡಿಲ್ಲ ಎಂದರೆ ಸರಿಯಲ್ಲ. ಚಾಸಾ 1 ರವರಿಗೆ ಸಹಾಯ ಮಾಡಲು ಸುಳ್ಳು ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

**ಮರು-ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೆ. ಸರಿ ಇದೆ.

**ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಧೀಶರು, ಸಿರುಗುಪ್ಪ .**